KATK900005432019

**5 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ತಿಪಟೂರು**

**ಎಸ್.ಸಿ.ಸಂಖ್ಯೆಃ 10039/2019**

**ಪ್ರಮಾಣೀಕರಿಸಿದ ದಿನಾಂಕಃ 18-09-2024**
**ಚಾ.ಸಾ-7**
**ಪ್ರಾ.ಸಾ-4**

| | |
|---|---|
| ಹೆಸರು | ಕರಿಯಪ್ಪ |
| ತಂದೆ ಹೆಸರು | ತಿಮ್ಮಯ್ಯ |
| ವಯಸ್ಸು | 70 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸಸ್ಥಳ | ತಂಡಗ ಗ್ರಾಮ |

**ಮುಖ್ಯವಿಚಾರಣೆ, ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

ಚಾಸಾ-1 ಸುಮಾ ಗೊತ್ತು. ಆಕೆ ನನ್ನ ತಮ್ಮನ ಹೆಂಡತಿ. ಮೃತ ಸುರೇಶ ನನ್ನ ತಮ್ಮ. ಆತ ಈಗಿಲ್ಲ. ಆತ ರಾಮಮಂದಿರದ ಬಳಿ ಕೊಲೆಯಾಗಿದ್ದ. ಇದಕ್ಕೆ ಸಂಬಂಧಿಸಿದಂತೆ ಪೋಲಿಸರು ಸ್ಥಳಕ್ಕೆ ಬಂದಿದ್ರಾ ಗೊತ್ತಿಲ್ಲ. ಪೋಲಿಸರು ನನ್ನ ಸಮಕ್ಷಮ ಮಹಜರು ಮಾಡಿಲ್ಲ. ನಾನು ಮಹಜರಿಗೆ ಸ್ಥಳದಲ್ಲಿ ಸಹಿ ಮಾಡಿಲ್ಲ. ಪೋಲಿಸರು ಸ್ಥಳದಲ್ಲಿ ಏನು ವಶಪಡಿಸಿಕೊಂಡರು ಎಂದು ಗೊತ್ತಿಲ್ಲ. ಈ ಸಹಿಗಳು ನನ್ನವೇ. ( ಸಾಕ್ಷಿ ಎಫ್ ಎಸ್ ಎಲ್ ನಿಂದ ಬಂದ ಎರಡು ಡಬ್ಬಿಗಳ ಮೇಲಿನ ಎರಡು ಸಹಿಗಳನ್ನು ಗುರುತಿಸಿದ್ದಾರೆ. ಎರಡು ಡಬ್ಬಿಗಳು ಎಫ್ ಎಸ್ ಎಲ್ ನಿಂದ ಬಂದಂತಹ ಮಣ್ಣಿನ ಮತ್ತು ರಕ್ತ ಮಿಶ್ರಿತ ಮಣ್ಣಿನ ಡಬಿಗಳಾಗಿದ್ದು ಮಣ್ಣನ್ನು ಮತ್ತು ರಕ್ತ ಮಿಶ್ರಿತ ಮಣ್ಣನ್ನು ಮು.ಮಾ.5 ಮತ್ತು 6 ಎಂದು ಗುರುತಿಸಲಾಯಿತು. ಸಾಕ್ಷಿ ಗುರುತಿಸಿದ ಸಹಿಗಳನ್ನು ಮು. ಮಾ. 5(ಎ) ಮತ್ತು 6(ಎ) ಎಂದು ಗುರುತಿಸಲಾಯಿತು.)

***(ಈ ಹಂತದಲ್ಲಿ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಸರ್ಕಾರಿ ಅಭಿಯೋಜಕರು ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಗಿದೆ)***

## <u>ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ</u>

ದಿನಾಂಕಃ 17/02/2019 ರಂದು ಬೆಳಿಗ್ಗೆ 12.00 ರಿಂದ 1.00 ಗಂಟೆಗೆ ಪೋಲಿಸರು ರಾಮಮಂದಿರದ ಬಳಿ ಬಂದು ಮಹಜರು ಮಾಡಿದರು ಎಂದರೆ ಸರಿಯಲ್ಲ . ನಾನು ಸ್ಥಳದಲ್ಲಿ ಹಾಜರಿದ್ದೆ ಎಂದರೆ ಸರಿಯಲ್ಲ. ಪೋಲಿಸರು ಮಣ್ಣು ಮತ್ತು ರಕ್ತ ಮಿಶ್ರಿತ ಮಣ್ಣು ಮು.ಮಾ.5 ಮತ್ತು 6 ನ್ನು ಎರಡು ಪ್ರತ್ಯೇಕ ಡಬ್ಬಿಗಳಲ್ಲಿ ಶೇಖರಿಸಿ ಸೀಲುಮಾಡಿ ಅಮಾನತ್ತು ಪಡಿಸಿಕೊಂಡರು ಎಂದರೆ ಸರಿಯಲ್ಲ. ಮಹಜರನ ಅಂಶಗಳನ್ನು ತಿಳಿದುಕೊಂಡು ನಾನು ಸ್ಥಳದಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನನಗೆ ಎಲ್ಲಾ ವಿಚಾರ ಗೊತ್ತಿದ್ದರೂ ಸಹ ನಾನು ಆರೋಪಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಆರೋಪಿ ಪರ ವಕೀಲರು ಪಾಟೀಸವಾಲು ಇಲ್ಲವೆಂದಿದ್ದಾರೆ**

**(ಮರುವಿಚಾರಣೆ ಇಲ್ಲವೆಂದಿದ್ದಾರೆ).**
**(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).**

**ಓದಿ, ಹೇಳಿ, ಕೇಳಿ, ಸರಿ ಇದೆ ಎಂದು ಒಪ್ಪಿರುತ್ತಾರೆ.**

**(ಪುಷ್ಪಾವತಿ.ವಿ)**
**5 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು**
**ತಿಪಟೂರು**